ರಾಜ್ಯದಲ್ಲಿನ ಜೀತ ವಿಮುಂಕ್ತರ ಪುನರ್ ವಸತಿ

೧೫೭೫. ಶ್ರೀ ಜಿ. ರಾಜುಗೌಡ (ಹನ್ನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಗುರ್ತಿಸಿರುವ ಜೀತ ವಿಮುಕ್ತರ ಪೈಕಿ ಅವರುಗಳನ್ನು ಪುನರ್ ವಸತಿಗೊಳಿಸುವ ಕಾರ್ಯ ಯಾವ ಯಾವ ತಾಲ್ಲೂಕುಗಳಲ್ಲಿ ನಡೆಸಲಾಗಿದೆ.

ಆ) ಅವರುಗಳಿಗೆ ಸಲ್ಲಬೇಕಾದ ಸೌಲಭ್ಯಗಳು ದೊರಕಿವೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ರಾಜ್ಯದಲ್ಲಿ ಗುರ್ತಿಸಿರುವ ಜೀತ ವಿಮುಂಕ್ತರ ಪೈಕಿ ಅವರುಗಳನ್ನು ಪುನರ್ ವಸತಿಗೊಳಿಸುವ ಕಾರ್ಯ ಈ ಕೆಳಕಂಡ ತಾಲ್ಲೂಕುಗಳಲ್ಲಿ ನಡೆಸಲಾಗಿದೆ. (ಈ ಯೋಜನೆಯ ಪ್ರಾರಂಭದಿಂದ)

೧ ಬೆಂಗಳೂರು ಜಿಲ್ಲೆ

೧	ಬೆಂಗಳೂರು ಉತ್ತರ	ತಾಲ್ಲೂಕು
೨	ಬೆಂಗಳೂರು ದಕ್ಷಿಣ	ತಾಲ್ಲೂಕು
೩	ಆನೇಕಲ್	ತಾಲ್ಲೂಕು

೨ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್

೪	ದೊಡ್ಡಬಳ್ಳಾಪುರ	ತಾಲ್ಲೂಕು
೫	ನೆಲಮಂಗಲ	,,
೬	ದೇವನಹಳ್ಳಿ	,,
೭	ಹೊಸಕೋಟೆ	,,
೮	ರಾಮನಗರ	,,
೯	ಚನ್ನಪಟ್ಟಣ	,,
೧೦	ಮಾಗಡಿ	,,
೧೧	ಕನಕಪುರ	,,

೩ ಹಾಸನ ಜಿಲ್ಲಾ ಪರಿಷತ್

೧೨	ಹಾಸನ	ತಾಲ್ಲೂಕು
೧೩	ಆಲೂರು	,,
೧೪	ಬೇಲೂರು	,,
೧೫	ಸಕಲೇಶಪುರ	,,
೧೬	ಅರಕಲಗೂಡು	,,
೧೭	ಹೊಳೆನರಸೀಪುರ	,,
೧೮	ಚೆನ್ನರಾಯಪಟ್ಟಣ	,,
೧೯	ಅರಸೀಕೆರೆ	,,

೪ ಕೋಲಾರ ಜಿಲ್ಲಾ ಪರಿಷತ್

೨೦	ಕೋಲಾರ	ತಾಲ್ಲೂಕು
೨೧	ಮಾಲೂರು	,,
೨೨	ಬಂಗಾರಪೇಟೆ	,,
೨೩	ಮುಳಬಾಗಿಲು	,,
೨೪	ಶ್ರೀನಿವಾಸಪುರ	,,
೨೫	ಚಿಂತಾಮಣಿ	,,
೨೬	ಶಿಡ್ಲಘಟ್ಟ	,,
೨೭	ಗೌರಿಬಿದನೂರು	,,
೨೮	ಬಾಗೇಪಲ್ಲಿ	,,
೨೯	ಗುಡಿಬಂಡೆ	,,
೩೦	ಚಿಕ್ಕಬಳ್ಳಾಪುರ	,,

೫ ಮೈಸೂರು ಜಿಲ್ಲಾ ಪರಿಷತ್

೩೧	ಮೈಸೂರು	ತಾಲ್ಲೂಕು
೩೨	ಟಿ. ನರಸೀಪುರ	,,
೩೩	ಕೊಳ್ಳೇಗಾಲ	,,
೩೪	ಚಾಮರಾಜನಗರ	,,
೩೫	ಗುಂಡ್ಲುಪೇಟೆ	,,
೩೬	ಯಳಂದೂರು	,,
೩೭	ಕೆ. ಆರ್ ನಗರ	,,
೩೮	ನಂಜನಗೂಡು	,,
೩೯	ಪಿರಿಯಾಪಟ್ಟಣ	,,
೪೦	ಹೆಚ್. ಡಿ. ಕೋಟೆ	,,

೬ ಮಂಡ್ಯ ಜಿಲ್ಲಾ ಪರಿಷತ್

೪೧	ಮಂಡ್ಯ	ತಾಲ್ಲೂಕು
೪೨	ಮದ್ದೂರು	,,
೪೩	ಮಳವಳ್ಳಿ	,,
೪೪	ಶ್ರೀರಂಗಪಟ್ಟಣ	,,
೪೫	ಪಾಂಡವಪುರ	,,
೪೬	ನಾಗಮಂಗಲ	,,
೪೭	ಕೆ. ಆರ್. ಪೇಟೆ	,,

೭ ಬಳ್ಳಾರಿ ಜಿಲ್ಲಾ ಪರಿಷತ್

೪೮	ಸಿರಗುಪ್ಪ	ತಾಲ್ಲೂಕು
೪೯	ಸಂಡೂರು	,,
೫೦	ಹೊಸಪೇಟೆ	,,
೫೧	ಬಳ್ಳಾರಿ	,,
೫೨	ಕೂಡ್ಲಿಗಿ	,,

೮ ಮಂಗಳೂರು ಜಿಲ್ಲಾ ಪರಿಷತ್

೫೩	ಮಂಗಳೂರು	ತಾಲ್ಲೂಕು
೫೪	ಕುಂದಾಪುರ	,,
೫೫	ಉಡುಪಿ	,,
೫೬	ಕಾರ್ಕಳ	,,
೫೭	ಪುತ್ತೂರು	,,
೫೮	ಸುಳ್ಯ	,,
೫೯	ಬೆಳ್ತಂಗಡಿ	,,

೯ ತುಮಕೂರು ಜಿಲ್ಲಾ ಪರಿಷತ್

೬೦	ತುಮಕೂರು	ತಾಲ್ಲೂಕು
೬೧	ಗುಬ್ಬಿ	,,
೬೨	ಕುಣಿಗಲ್	,,
೬೩	ತಿಪಟೂರು	,,
೬೪	ತುರುವೇಕೆರೆ	,,
೬೫	ಚಿಕ್ಕನಾಯ್ಕನಹಳ್ಳಿ	,,
೬೬	ಮಧುಗಿರಿ	,,
೬೭	ಸಿರಾ	,,
೬೮	ಕೊರಟಗೆರೆ	,,
೬೯	ಪಾವಗಡ	,,

೧೦ ಗುಲ್ಬರ್ಗ ಜಿಲ್ಲಾ ಪರಿಷತ್

೭೦	ಗುಲ್ಬರ್ಗಾ	ತಾಲ್ಲೂಕು
೭೧	ಆಳಂದ	,,
೭೨	ಚಿತ್ತಾಪುರ	,,
೭೩	ಸೇಡಂ	,,
೭೪	ಷೋರಾಪುರ	,,
೭೫	ಜೇವರ್ಗಿ	,,
೭೬	ಯಾದಗಿರಿ	,,

೧೧ ಶಿವಮೊಗ್ಗ ಜಿಲ್ಲಾ ಪರಿಷತ್

೭೭	ಶಿವಮೊಗ್ಗ	ತಾಲ್ಲೂಕು
೭೮	ಭದ್ರಾವತಿ	,,
೭೯	ಚೆನ್ನಗಿರಿ	,,
೮೦	ಹೊನ್ನಾಳಿ	,,
೮೧	ತೀರ್ಥಹಳ್ಳಿ	,,
೮೨	ಸಾಗರ	,,
೮೩	ಸೊರಬ	,,
೮೪	ಶಿಕಾರಿಪುರ	,,
೮೫	ಹೊಸನಗರ	,,

೧೨ ರಾಯಚೂರು ಜಿಲ್ಲಾ ಪರಿಷತ್

೮೬	ರಾಯಚೂರು	ತಾಲ್ಲೂಕು
೮೭	ದೇವದುರ್ಗ	,,
೮೮	ಮಾನ್ವಿ	,,
೮೯	ಲಿಂಗಸೂಗೂರು	,,
೯೦	ಕುಷ್ಟಗಿ	,,
೯೧	ಸಿಂಧನೂರು	,,
೯೨	ಕೊಪ್ಪಳ	,,
೯೩	ಗಂಗಾವತಿ	,,
೯೪	ಯಲಬುರ್ಗಾ	,,

೧೩ ವಂಡಿಕೇರಿ ಜಿಲ್ಲಾ ಪರಿಷತ್

೯೫	ಸೋಮವಾರಪೇಟೆ	ತಾಲ್ಲೂಕು

೧೪ ಬಿಜಾಪುರ ಜಿಲ್ಲಾ ಪರಿಷತ್

೯೬	ಬಿಜಾಪುರ	ತಾಲ್ಲೂಕು
೯೭	ಮುದ್ದೇಬಿಹಾಳ	,,
೯೮	ಸಿಂದಗಿ	,,
೯೯	ಬಾಗಲಕೋಟೆ	,,
೧೦೦	ಹುನಗುಂದ	,,
೧೦೧	ಜಮಖಂಡಿ	,,
೧೦೨	ಬಾಗೇವಾಡಿ	,,
೧೦೩	ಇಂಡಿ	,,
೧೦೪	ಮುಧೋಳ	,,
೧೦೫	ಬೀಳಗಿ	,,
೧೦೬	ಬಾದಾಮಿ	,,

೧೫ ಚಿತ್ರದುರ್ಗ ಜಿಲ್ಲಾ ಪರಿಷತ್

೧೦೭	ಚಿತ್ರದುರ್ಗ	ತಾಲ್ಲೂಕು
೧೦೮	ಚಳ್ಳಕೆರೆ	,,
೧೦೯	ಹಿರಿಯೂರು	,,
೧೧೦	ಮೊಳಕಾಲ್ಮೂರು	,,
೧೧೧	ಹೊಳಲ್ಕೆರೆ	,,
೧೧೨	ಹೊಸದುರ್ಗ	,,
೧೧೩	ದಾವಣಗೆರೆ	,,
೧೧೪	ಹರಿಹರ	,,
೧೧೫	ಜಗಳೂರು	,,

೧೬ ಬೆಳಗಾಂ ಜಿಲ್ಲಾ ಪರಿಷತ್

೧೧೬	ಗೋಕಾಕ್	ತಾಲ್ಲೂಕು
೧೧೭	ಹುಕ್ಕೇರಿ	,,
೧೧೮	ರಾಮದುರ್ಗ	,,
೧೧೯	ಬೆಳಗಾಂ	,,
೧೨೦	ಬೈಲಹೊಂಗಲ	,,
೧೨೧	ಚಿಕ್ಕೋಡಿ	,,
೧೨೨	ಸೌಂದತ್ತಿ	,,
೧೨೩	ಖಾನಾಪುರ	,,

೧೭ ಚಿಕ್ಕಮಗಳೂರು ಜಿಲ್ಲಾ ಪರಿಷತ್

೧೨೪	ಚಿಕ್ಕಮಗಳೂರು	ತಾಲ್ಲೂಕು
೧೨೫	ಕಡೂರು	,,
೧೨೬	ಕೊಪ್ಪ	,,
೧೨೭	ತರೀಕೆರೆ	,,
೧೨೮	ಎನ್. ಆರ್. ಪುರ	,,
೧೨೯	ಮೂಡಿಗೆರೆ	,,
೧೩೦	ಶೃಂಗೇರಿ	,,

೧೮ ಉತ್ತರ ಕನ್ನಡ (ಕಾರವಾರ) ಜಿಲ್ಲಾ ಪರಿಷತ್

೧೩೧	ಸಿದ್ದಾಪುರ	ತಾಲ್ಲೂಕು
೧೩೨	ಶಿರ್ಸಿ	,,
೧೩೩	ಭಟ್ಕಳ	,,

೧೯ ಬೀದರ್ ಜಿಲ್ಲಾ ಪರಿಷತ್

೧೩೪	ಬಸವಕಲ್ಯಾಣ	,,

ಆ) ಹೌದು

(ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು) ಉತ್ತರಿಸಿದರು)

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಈಗ ರಾಜ್ಯದಲ್ಲಿ ಒಟ್ಟು ಗಂರುಶಿಃರತಕ್ಕಂಥ ಜೀತ ಬಮುಕ್ತರ ಸಂಖ್ಯೆ ಎಷ್ಟು ? ಅವರಲ್ಲಿ ಎಷ್ಟು ಜನರಿಗೆ ಪುನರ್ವಸತಿ ಮಾಡಿದ್ದೀರಿ ? ರಾಜ್ಯದಲ್ಲಿ ೧೭೫ ತಾಲ್ಲೂಕುಗಳಲ್ಲಿ ಕೇವಲ ೧೩೪ ತಾಲ್ಲೂಕುಗಳಲ್ಲಿ ಮಾತ್ರ ಈ ಕಾರ್ಯಕ್ರಮ ತೆಗೆದುಕೆ ಳ್ಳಲ್ಪಡೇ ಇರುವುದಕ್ಕೆ ಕಾರಣ ಏನು ?

ಶ್ರೀ ಆರ್. ವಿ. ದೇಶಪಾಂಡೆ.—ರಾಜ್ಯದ ೧೭೫ ತಾಲ್ಲೂಕುಗಳಲ್ಲಿ ಕೇವಲ ೧೩೪ ತಾಲ್ಲೂಕುಗಳಲ್ಲಿ ನಾವು ಬಾಂಡೆಡ್ ಲೇಬರರ್ಸ್ ಐಡೆಂಟಿಫೈ ಮಾಡಿದ್ದೇವೆ. ರಾಜ್ಯದಲ್ಲಿ ೧೯೭೬-೮೦ನೇ ಇಸವಿಯಿಂದ ಈ ಯೋಜನೆ ಜಾರಿಯಲ್ಲಿ ಬಂದಿದೆ. ಆದರೆ ೪೧ ತಾಲ್ಲೂಕುಗಳಲ್ಲಿ ನಮಗೆ ಬಾಂಡೆಡ್ ಲೇಬರರ್ಸ್ ಐಡೆಂಟಿಫೈ ಮಾಡುವುದಕ್ಕೆ ಆಗಲಿಲ್ಲ. ಆದ್ದರಿಂದ ಕೇವಲ ೧೩೪ ತಾಲ್ಲೂಕುಗಳಿಗೆ ಇದು ಸೀಮಿತವಾಗಿದೆ. ಟೋಟಲೀ ಐಡೆಂಟಿಫೈ ಮಾಡಿರುವುದು ೬೨,೬೮೯ ಜನರನ್ನು ಇವರಲ್ಲಿ ಸಾಧಾರಣ ೪೪,೩೭

ಜನರಿಗೆ ಈಗಾಗಲೇ ಪುನರ್ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಸಾಧಾರಣ ಮಾರ್ಚ್ ೧೯೮೮ರ ತನಕ ೧೯ ಕೋಟಿ ೮೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪಾಕ್ಸಿವಮ್ ಸಬ್ಸಿಡಿ ೬೨೫೦ ಕೊಡುತ್ತೇವೆ. ಇನ್ನೂ ೧೧,೪೪೦ ಜನರಿಗೆ ರೀಹೆಬಿಲಿಟೇಟ್ ಮಾಡಬೇಕಾಗಿದೆ, ಆದಷ್ಟು ಬೇಗನೆ ಮಾಡುವಂಥ ಕಾರ್ಯಕ್ರಮ ಸರ್ಕಾರ ಹಾಕಿ ಕೊಂಡಿದೆ.

ಶ್ರೀ ಜೆ. ರಾಜಂಗೌಡ.—ಈ ಪ್ರಶ್ನೆಯನ್ನು ಕೇಳಿರತಕ್ಕಂಥ ಮೂಲ ಉದ್ದೇಶ ಏನೆಂದರೆ, ನೀವು ಆಸ್ತಿಗಳನ್ನು ವಿತರಣೆ ಮಾಡುತ್ತೀರಿ, ಈ ರೀತಿ ವಿತರಣೆ ಮಾಡುವುದರಲ್ಲಿ ಅನೇಕ ರೀತಿಯಿಂದ ದುರುಪಯೋಗವಾಗುತ್ತಿದೆ. ದಯವಿಟ್ಟು, ನನ್ನ ಸಲಹೆ ಪ್ರಕಾರ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ತಾವು ದಯವಿಟ್ಟು ಈ ೧೧ ಸಾವಿರ ಜನಕ್ಕೆ ಏನು ಕೊಡಬೇಕು, ಅದರಲ್ಲಿ ಖಾಯಂ ಆದಾಯ ಬರತಕ್ಕಂಥ ಆಸ್ತಿಯನ್ನು ತಾವು ವಿತರಣೆ ಮಾಡುವಾಗ ಏನು ಸಿ ಆಂಡ್ ಡಿ ಲ್ಯಾಂಡ್‌ನ್ನು ತೆಗೆದು ಈ ಜೀತ ವಿಮುಕ್ತರಿಗೆ ಕೊಟ್ಟು ನೀರಾವರಿ ಬಾವಿ ಮಾಡಿ, ತನ್ಮೂಲಕ ಆದಾಯ ಬರತಕ್ಕಂಥ ವ್ಯವಸ್ಥೆ ಮಾಡಿದಾಗ ದುರುಪಯೋಗವಾಗುವುದು ತಪ್ಪುತ್ತದೆ. ಅದು ಬಿಟ್ಟು, ಕಾರಿ, ಕೋಳಿ ತೆಗೆದುಕೊಂಡಾಗ, ಎಲ್ಲಾ ಅಧಿಕಾರಿಗಳಿಗೆ ಆರ್ಥ ಆಗುತ್ತದೆ, ಜನಗಳಿಗೆ ಏನೂ ಸಿಕ್ಕುವುದಿಲ್ಲ, ನೀವು ಕೊಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ದಯವಿಟ್ಟು ನನ್ನ ಸಲಹೆ ಪ್ರಕಾರ ಕಾರ್ಯಗತ ಮಾಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೇ, ಈ ಕಾರ್ಯಕ್ರಮ ಗವರ್ನಮೆಂಟ್ ಆಫ್ ಇಂಡಿಯಾ ಗೈಡ್‌ಲೈನ್ಸ್ ಪ್ರಕಾರ ಇಂಪ್ಲಿಮೆಂಟ್ ಮಾಡಿದ್ದೇನೆ. ಇಲ್ಲಿ ಕೇಂದ್ರಸರ್ಕಾರ ೫೦ ಪರ್ಸೆಂಟ್ ಸಬ್ಸಿಡಿ, ರಾಜ್ಯಸರ್ಕಾರದ ೫೦ ಪರ್ಸೆಂಟ್ ಕೊಡುತ್ತದೆ. ಇದರಲ್ಲಿ ಏನಾದರೂ ಹೆಚ್ಚುಕಡಿಮೆ ಪ್ರೋಗ್ರಾಂನಲ್ಲಿ ಮತ್ತು ಬಿಸಿನೆಸ್ ಇಂಡಸ್ಟ್ರಿ ಸರ್ವೀಸ್‌ನಲ್ಲಿ ಬ್ಯಾಂಡೆಡ್ ಲೇಬರ್ಸ್‌ಗೆ ಸಹಾಯ ಮಾಡಬೇಕೆಂದು ಕಾರ್ಯಕ್ರಮ ಇದೆ. ಇದರಲ್ಲಿ ಲ್ಯಾಂಡ್ ಇದ್ದರೆ, ಲ್ಯಾಂಡ್ ಕೊಡಬೇಕಾಗುತ್ತದೆ, ಹೌಸ್ ಸೈಟು ಇದ್ದರೆ, ಹೌಸ್ ಸೈಟು ಕೊಡಬೇಕಾಗುತ್ತದೆ. ಮನೆ ಇದ್ದರೆ, ಮನೆ ಕೊಡಬೇಕಾಗುತ್ತದೆ. ಅಪರ ಬಡತನ ರೇಖೆ ಏನಿದೆ ೬೪೮೦ ರೂಪಾಯಿಗಳು. ಈ ರೇಖೆ ಮೇಲೆ ಬರುವಹಾಗೆ ಸಹಾಯ ಮಾಡಬೇಕಾಗುತ್ತದೆ. ಆದರೂ ಮಾನ್ಯ ಸದಸ್ಯರು ಏನು ಸೂಚನೆ ಮಾಡಿದ್ದಾರೆ, ಆ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಸೀದಿಗಳ ದುರಸ್ತಿ

೧೫೮೭. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬-೮೭, ೧೯೮೭-೮೮ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಸೀದಿಗಳ ದುರಸ್ತಿ ಮತ್ತು ಕಟ್ಟಡಕ್ಕಾಗಿ ವಕ್ಫ್ ಮಂಡಳಿಯಿಂದ ಎಷ್ಟು ಹಣ ಕೊಡಲಾಗಿದೆ ?

ಆ) ನೆರವಿಗಾಗಿ ಬಂದ ಅರ್ಜಿಗಳಲ್ಲಿ ವಿಲೇವಾರಿಯಾಗಿರುವ ಮತ್ತು ಬಾಕಿಯಿರುವ ಅರ್ಜಿಗಳೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು).—

ಅ) ೧೯೮೬-೮೭ ರೂ. ೩,೬೦,೦೦೦-೦೦

೧೯೮೭-೮೮ ರೂ. ೨.೨೯,೦೦೦-೦೦